2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ **115/2018**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮಹಮದ್ ಸಲೀಂ ಅಬ್ಬಾಸ್ | ಪಿಡಬ್ಲೂ - 13 |
| ತಂದೆಯ ಹೆಸರು | - | ಅಬ್ಬಾಸ್ ಎಂ.ಪಿ | ಸಿಡಬ್ಲೂ - 19 |
| ವಯಸ್ಸು | - | 43 ವರ್ಷ | |
| ಉದ್ಯೋಗ | - | ಪೊಲೀಸ್ ನಿರೀಕ್ಷಕರು,<br>ಆಂತರಿಕ ಭದ್ರತಾ ವಿಭಾಗ | |
| ವಾಸ ಸ್ಥಳ | - | ಚಿಕ್ಕಮಗಳೂರು | |

ದಿನಾಂಕಃ 18-03-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದ -</u>

1. ನಾನು ದಿನಾಂಕ 25.09.2017 ರಿಂದ 16.10.2017 ರವರೆಗೆ ಚಿಕ್ಕಮಗಳೂರು ನಗರ ವೃತ್ತ ನಿರೀಕ್ಷಕರ ಹೆಚ್ಚುವರಿ ಪ್ರಭಾರೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.
2. ದಿನಾಂಕಃ 28.09.2017 ರಂದು ಈ ಪ್ರಕರಣದ ಕಡತವನ್ನು ಪ್ರಾಸಾ.12 ರವರಿಂದ ಪಡೆದುಕೊಂಡು ಪರಿಶೀಲಿಸಿರುತ್ತೇನೆ. ದಿನಾಂಕ 29.09.2017 ರಂದು ತನಿಖೆಯನ್ನು ಮುಂದುವರೆಸಿ ಸಾಕ್ಷಿದಾರರಾದ ಪ್ರಾಸಾ.6, ಪ್ರಾಸಾ.7, ಪ್ರಾಸಾ.8, ಪ್ರಾಸಾ.10, ಚಾಸಾ.11 ಮತ್ತು ಚಾಸಾ.13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.
3. ಅದೇ ದಿನ ಕೃತ್ಯ ನಡೆದ ಸ್ಥಳವಾದ ಚಿಕ್ಕಮಗಳೂರಿನ ಲಕ್ಷ್ಮೀಶನಗರ 1 ನೇ ಕ್ರಾಸ್ ನಲ್ಲಿರುವ ಆರೋಪಿತರ ಮನೆಗೆ ಭೇಟಿ ನೀಡಿರುತ್ತೇನೆ. ಸ್ಥಳಕ್ಕೆ ಪ್ರಾಸಾ.2 ಮತ್ತು ಪ್ರಾಸಾ.9 ರವರಿಗೆ ನಿಪಿ.16 ರಂತೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ

ಬರಮಾಡಿಕೊಂಡಿರುತ್ತೇನೆ. ನಿಪಿ.16 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.16(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಆರೋಪಿತರ ಮನೆಗೆ ಬೀಗ ಹಾಕಿದ್ದರಿಂದ ಮನೆಯ ಮುಂಭಾಗದಲ್ಲಿ ಹಾಜರಿದ್ದ ಪ್ರಾಸಾ.1 ಪಿರ್ಯಾದಿದಾರರು ಸದರಿ ಮನೆಯಲ್ಲಿ ಆಕೆ ಆರೋಪಿತರೊಂದಿಗೆ ವಾಸವಾಗಿದ್ದ ಸಮಯದಲ್ಲಿ ಅದೇ ಮನೆಯಲ್ಲಿ ಆರೋಪಿತರು ಮೊಬೈಲ್ ಚಾರ್ಜರ್ ನ ವೈಯರ್ ನಿಂದ ಆಕೆಯ ಕುತ್ತಿಗೆಯನ್ನು ಬಿಗಿದು ಕೊಲೆ ಮಾಡಲು ಪ್ರಯತ್ನಿಸಿದ್ದಾಗಿ ಮತ್ತು ಚಾಕುವನ್ನು ಸ್ಟೌವ್ ಮೂಲಕ ಬಿಸಿ ಮಾಡಿ ಆಕೆಯ ಬಲಗಾಲು ಮತ್ತು ಎಡಗೈಗೆ ಬರೆ ಹಾಕಿದ್ದಾಗಿ ತಿಳಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಮೇಲೆ ಹೇಳಿದ ಪ್ರಾಸಾ.2 ಮತ್ತು ಪ್ರಾಸಾ.9 ರವರ ಸಮಕ್ಷಮ ಸಂಜೆ 7.00 ಗಂಟೆಯಿಂದ 7.45 ಗಂಟೆಯವರೆಗೆ ನಿಪಿ.2 ರಂತೆ ಪಂಚನಾಮೆಯನ್ನು ಜರುಗಿಸಿ ಪಿರ್ಯಾದಿಯ ಮತ್ತು ಪಂಚರ ಸಹಿಗಳನ್ನು ಪಡೆದಿರುತ್ತೇನೆ. ನಿಪಿ.2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ನಿಪಿ.3 ಮತ್ತು ನಿಪಿ.4 ರಂತೆ ಫೋಟೋಗಳನ್ನು ತೆಗೆಸಿರುತ್ತೇನೆ.

4. ನಂತರ ಅದೇ ದಿನ ಪಿರ್ಯಾದಿದಾರರಿಗೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನೀಡುವಂತೆ ನೋಟೀಸನ್ನು ಜಾರಿ ಮಾಡಿರುತ್ತೇನೆ.

5. ದಿನಾಂಕ 05.10.2017 ರಂದು ಪ್ರಾಸಾ.1 ಪಿರ್ಯಾದಿರವರು ವೃತ್ತ ನಿರೀಕ್ಷಕರ ಕಚೇರಿಗೆ ಹಾಜರಾಗಿ ಆಕೆಯ ಮತ್ತು 1 ನೇ

ಆರೋಪಿಯ ಮದುವೆ ಆಮಂತ್ರಣ ಪತ್ರಿಕೆ, ಅವರ ಮದುವೆಯ ಸಮಯದಲ್ಲಿ ತೆಗೆದ ಫೋಟೋಗಳು, ಅವರ ಮದುವೆಯ ಪ್ರಮಾಣ ಪತ್ರ ಮತ್ತು ಆರೋಪಿಗಳು ಪಿರ್ಯಾದುದಾರರ ಕುತ್ತಿಗೆಗೆ ಮೊಬೈಲ್ ಚಾರ್ಜರ್ ನ ವೈಯರ್ ನಿಂದ ಬಿಗಿದಾಗ ಆದ ಗಾಯಗಳ ಬಗ್ಗೆ ಒಂದು ಫೋಟೋ, ಆರೋಪಿತರು ಚಾಕುವಿನಿಂದ ಪಿರ್ಯಾದಿಯ ಎಡಗೈಗೆ ಬರೆ ಹಾಕಿದಾಗ ಆದ ಗಾಯಕ್ಕೆ ಸಂಬಂಧಿಸಿದ ಒಂದು ಫೋಟೋ ಮತ್ತು ಆರೋಪಿತರು ಚಾಕುವಿನಿಂದ ಪಿರ್ಯಾದಿಯ ಬಲಗಾಲಿಗೆ ಬರೆ ಹಾಕಿದಾಗ ಆದ ಗಾಯಕ್ಕೆ ಸಂಬಂಧಿಸಿದ ಒಂದು ಫೋಟೋಗಳನ್ನು ತಂದು ಹಾಜರುಪಡಿಸಿರುತ್ತಾರೆ. ಚಾಸಾ.4 ಮತ್ತು ಪ್ರಾಸಾ.4 ರವರಿಗೆ ನಾನು ನಿಪಿ.13 ರಂತೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ಬರಮಾಡಿಕೊಂಡು ಅವರ ಸಮಕ್ಷಮ ಪಿರ್ಯಾದಿದಾರರು ಹಾಜರುಪಡಿಸಿದ ಮೇಲೆ ಹೇಳಿದ ದಾಖಲೆಗಳನ್ನು ನಿಪಿ.5 ರಂತೆ ಸಂಜೆ 5.00 ಗಂಟೆಯಿಂದ 6.00 ಗಂಟೆಯವರೆಗೆ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿರುತ್ತೇನೆ. ನಿಪಿ.13 ಮತ್ತು ನಿಪಿ.5 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.13(ಬಿ) ಮತ್ತು ನಿಪಿ.5(ಡಿ) ಎಂದು ಗುರುತಿಸಲಾಯಿತು.

6. ನಿಪಿ.5 ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡ ದಾಖಲಾತಿಗಳು ಮತ್ತು ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.6 ರಿಂದ ನಿಪಿ.11 ಎಂದು ಗುರುತಿಸಲಾಗಿರುತ್ತದೆ. ನಿಪಿ.5 ರ ಕಾಲಕ್ಕೆ

ಅಮಾನತುಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 14/2017 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.22 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.22(ಎ) ಎಂದು ಗುರುತಿಸಲಾಯಿತು.

7. ದಿನಾಂಕ 08.10.2017 ರಂದು ಪಿರ್ಯಾದಿದಾರರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

8. ದಿನಾಂಕ 13.10.2017 ರಂದು ಪಿರ್ಯಾದಿದಾರರ ಗಾಯದ ಪ್ರಮಾಣ ಪತ್ರವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಫ್ರಾಸಾ.11 ರವರಿಂದ ನಿಪಿ.17 ರಂತೆ ಪಡೆದುಕೊಂಡಿರುತ್ತೇನೆ. ನಿಪಿ.17 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.17(ಬಿ) ಎಂದು ಗುರುತಿಸಲಾಯಿತು.

9. ದಿನಾಂಕ 16.10.2017 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.20 ರವರಿಗೆ ಹಸ್ತಾಂತರಿಸಿರುತ್ತೇನೆ.

(ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.